ಡಿಸೆಂಬರ್ 22, 2013

# ರಾಜಕೀಯಅವಕಾಶವಾದಕ್ಕೆಜನಮನ್ನಣೆಯತೊಗಲು

ಅರುಣ್‌ಜೇಟ್ಲಿ
ರಾಜ್ಯಸಭೆ ವಿರೋಧ ಪಕ್ಷದ ನಾಯಕರು

ಜೂನ್ 1975ರಿಂದ ಜನವರಿ 1977ರ ಆಂತರಿಕತುರ್ತು ಪರಿಸ್ಥಿತಿಯ ಅವಧಿಯು ನನಗೆ ಉತ್ತಮ ಕಲಿಕಾ ಅನುಭೂತಿಯಾಗಿತ್ತು. ಕೇವಲ ಓರ್ವ ವಿದ್ಯಾರ್ಥಿಯಾಗಿದ್ದ ನಾನು, ತುರ್ತು ಪರಿಸ್ಥಿತಿ ವಿರೋಧಿಸಿದ ಕಾರಣ 19 ತಿಂಗಳ ಸೆರೆವಾಸ ಅನುಭವಿಸಿದವರಲ್ಲಿ ಅತಿಕಿರಿಯನಾಗಿದ್ದೆ. ತುರ್ತು ಪರಿಸ್ಥಿತಿ ಇನ್ನೆಷ್ಟುಅವಧಿ ಮುಂದುವರಿಯಲಿದೆಎಂಬುದೇ ಸೆರೆವಾಸದಲ್ಲಿದ್ದ ನಮ್ಮೆಲ್ಲರ ಮುಖ್ಯ ಪ್ರಶ್ನೆಯಾಗಿತ್ತು. ಸರ್ವಾಧಿಕಾರವನ್ನೇ ನ್ಯಾಯಸಮ್ಮತ ಮಾರ್ಗವೆಂಬಂತೆ ನಡೆದುಕೊಂಡ ಅಂದಿನ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು, ತುರ್ತುಪರಿಸ್ಥಿತಿ ಮುಂದುವರಿಸುತ್ತಾ, ಶಿಸ್ತಿನ ಯುಗದಲ್ಲಿ ಪತ್ರಿಕಾ ಸ್ವಾತಂತ್ರ್ಯ ಹರಣ ಮತ್ತುರಾಜಕೀಯ ವಿರೋಧಿಗಳ ಬಂಧನ ಅನಿವಾರ್ಯವಾದ ಕಹಿ ಗುಳಿಗೆಗಳು ಎಂದು ಪ್ರತಿಪಾದಿಸಿದ್ದರು. ಅವರ ನಿರ್ಣಯಕ್ಕೆಜನ ಮನ್ನಣೆದೊರೆತಿದೆಎಂದುಅವರು ತಿಳಿದುಕೊಂಡಿದ್ದರು. ತುರ್ತುಪರಿಸ್ಥಿತಿಯಲ್ಲಿ ಅವರು ಪ್ರಕಟಿಸಿದ್ದ 20 ಅಂಶಗಳ ಕಾರ್ಯಕ್ರಮಕ್ಕೆಜನ ಮನ್ನಣೆದೊರೆತಿದೆ ಎಂಬ ದೃಢ ವಿಶ್ವಾಸಅವರದ್ದಾಗಿತ್ತು. ಆ ಮನ್ನಣೆಯ ಪ್ರಮಾಣ ಅಳೆಯುವ ಬಗೆ ಇರಲಿಲ್ಲ. ಆದರೂ, ಏಕಪಕ್ಷೀಯ ಮೌಲ್ಯಾಂಕನವೇಆಕೆಯರಾಜಕೀಯ ನಿರ್ಣಯಗಳಿಗೆ ಮಾರ್ಗದರ್ಶನ ನೀಡಿತು. ತುರ್ತು ಪರಿಸ್ಥಿತಿಗೆ ಜನ ಮನ್ನಣೆ ಹಾಗೂ ಒಪ್ಪಿಗೆಯಿದೆ ಎಂಬ ವಿಶ್ವಾಸದಿಂದಅವರು 1977ರ ಅಂತ್ಯದಲ್ಲಿ ಸಾರ್ವತ್ರಿಕಚುನಾವಣೆ ಘೋಷಿಸಿದರು. ಚುನಾವಣೆಯಲ್ಲಿ ಆಕೆಗೆ ಹೀನಾಯ ಸೋಲಾಯಿತು. ತನ್ನ ಮತಕ್ಷೇತ್ರದಲ್ಲೂಅವರು ಸೋತರು.

ಅತಿಯಾದ ಪ್ರಚಾರದಲ್ಲಿ ಈ ಒಂದುಅಪಾಯಅಡಗಿದೆ. ಪ್ರಜಾಪ್ರಭುತ್ವದ ಪಂಡಿತರುತಮ್ಮತರ್ಕವೇ ಸತ್ಯವೆಂಬ ನಂಬಿಕೆಯೊಂದಿಗೆ ವರ್ತಿಸುತ್ತಾರೆ. ಸರ್ಕಾರಗಳು ತಮ್ಮ ಪ್ರಚಾರವನ್ನೇಒಪ್ಪುತ್ತಾರೆ. ಇದೇರೀತಿಯುಪಿಎ ಸರ್ಕಾರವೂತನ್ನ ಸಾಧನೆಗಳ ಅತ್ಯಧಿಕ ಪ್ರಚಾರದಿಂದದಾರಿತಪ್ಪಿದೆ.

## ಆಮ್‌ಆದ್ಮಿ ಪಾರ್ಟಿ

ದೆಹಲಿ ವಿಧಾನ ಸಭೆಚುನಾವಣೆಯಲ್ಲಿಆಮ್‌ಆದ್ಮಿ ಪಾರ್ಟಿಖಂಡಿತವಾಗಲೂಅದ್ಭುತ ಸಾಧನೆ ಮಾಡಿದೆ. ಅದರ ನಿಶ್ಯಬ್ದ ಹಾಗೂ ವ್ಯವಸ್ಥಿತ ಪ್ರಚಾರ ಫಲತಾಂಶ ನೀಡಿದೆ.

ಮಂಡಿಸಿದ ಒಂದು ವಿಚಾರಕ್ಕೆ ಹಲವಾರು ಮತದಾರರ ವಿಶ್ವಾಸ ಗಳಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಗಳಿಸಿದ ಮತಗಳು ಮತ್ತು ಸ್ಥಾನಗಳ ಲೆಕ್ಕದಲ್ಲಿ ಭಾಜಪ ಪಕ್ಷದ ನಂತರಎರಡನೆದೊಡ್ಡ ಪಾರ್ಟಿಯಾಗಿ ಹೊರಹೊಮ್ಮಿದೆ. ದೆಹಲಿಯಲ್ಲಿ ಸ್ಪಷ್ಟ ಬಹುಮತಯಾರಿಗೂದೊರೆತಿಲ್ಲ. ಸ್ಟಷ್ಟ ಬಹುಮತದಕೊರತೆ, ಅತಂತ್ರ ವಿಧಾನಸಭೆಗೆಎಡೆ ಮಾಡಿಕೊಡುವುದಿಲ್ಲ. ಸಣ್ಣ ಪಾರ್ಟಿ ಬೆಂಬಲ ಪಡೆಯುವ ಮೂಲಕ ದೊಡ್ಡ ಪಾರ್ಟಿ ಸರ್ಕಾರರಚಿಸಬಹುದಾಗಿದೆ. ಎಂಟು ಸ್ಥಾನಗಳನ್ನು ಗಳಿಸಿರುವ ಕಾಂಗ್ರೆಸ್, ದೆಹಲಿಯ ಸಮತೋಲನ ಪಾರ್ಟಿಯ ಪಾತ್ರ ವಹಿಸಿದೆ. ಎಎಪಿ ಪಾರ್ಟಿಗೆ ಶರತ್ತುಬದ್ಧ ಬೆಂಬಲ ಪ್ರಕಟಿಸಿದೆ.

ಸಕಾರಾತ್ಮಕರಾಜಕಾರಣದ ಪ್ರತಿನಿಧಿಯಂತೆ ವರ್ತಿಸುವ ಭರವಸೆಯನ್ನು ಎಎಪಿ ನೀಡಿದೆ. ತತ್ವಸಿದ್ಧಾಂತಗಳೇ ಅದಕ್ಕೆ ಮಾರ್ಗದರ್ಶಿ ಸೂತ್ರಗಳು. ಕಾಂಗ್ರೆಸ್ಅಥವಾ ಭಾಜಪಗೆ ಬೆಂಬಲ ನೀಡುವಅಥವಾ ಪಡೆಯುವ ಇಚ್ಛೆ ಅದಕ್ಕಿಲ್ಲ. ಆದ್ದರಿಂದ ಎಎಪಿ ಸಾರ್ವಜನಿಕವಾಗಿ ಪ್ರಕಟಿಸಿದ ಮಾತಿನಂತೆ ನಡೆದರೆದೆಹಲಿ ವಿಧಾನಸಭೆಅತಂತ್ರವಾಗಿ ಉಳಿಯಲಿದೆ ಹಾಗೂ ಮರುಚುನಾವಣೆ ಅನಿವಾರ್ಯವಾಗಲಿದೆ.

ಸಕಾರಾತ್ಮಕರಾಜಕಾರಣದ ವಿಶ್ವಾಸ ಮೂಡಿಸಿದ ಎಎಪಿ, ತನ್ನ ನಿಲುವಿಗೆ ತದ್ವಿರುದ್ಧ ನಡೆ ನಡೆದಾಗತನ್ನ ಸಿದ್ಧಾಂತದೊಂದಿಗೆ ರಾಜಿ ಮಾಡಿಕೊಂಡಂತಾಗುತ್ತದೆ. ತತ್ವ ಸಿದ್ಧಾಂತದ ಅಡಿಪಾಯದ ಮೇಲೆ ನಿಂತವರು ಸಕಾರಾತ್ಮಕರಾಜಕಾರಣದ ಭಾಗವಾಗಿಅವಕಾಶವಾದರಾಜಕಾರಣ ಮಾಡುವಂತಿಲ್ಲ. ಎಎಪಿ ಶಾಸಕರು ಸೇರಿದಂತೆ ಹಲವಾರು ಶಾಸಕರು ಮರುಚುನಾವಣೆ ಬಯಸುವುದಿಲ್ಲ ಎಂಬುದು ಸತ್ಯಸಂಗತಿ. ಅಧಿಕಾರ ಸ್ವಾಧೀನ ಪಡಿಸಿಕೊಂಡು, ಕೆಲವಾರುಜನಪ್ರಿಯ ಯೋಜನೆಗಳ ಘೋಷಣೆ ಮೂಲಕ ಹೆಚ್ಚಿನ ಪ್ರಾತಿನಿಧ್ಯ ಗಳಿಸುವ ತಂತ್ರಗಾರಿಕೆಅವರದ್ದಿರಬಹುದು. ಇವೆಲ್ಲ ಸಾಧಿಸಬೇಕಿದ್ದರೆ, ಎಎಪಿ ಆಯ್ದುಕೊಂಡಉನ್ನತ ನೈತಿಕ ಪೀಠದಿಂದ ಕೆಳಗೆ ಇಳಿಯಲೇಬೇಕು. ಕಾಂಗ್ರೆಸ್ ಪಾರ್ಟಿಯ ಬೆಂಬಲ ಪಡೆಯುವುದಿಲ್ಲ ಎಂಬ ಅದರ ಸಾರ್ವಜನಿಕ ಹೇಳಿಕೆಯನ್ನು ಹಿಂಪಡೆಯಬೇಕು. ಆದ್ದರಿಂದಲೇಅದುತೋರಿಕೆಯಜನಾಭಿಪ್ರಾಯ ಸಂಗ್ರಹಣೆ ಮಾಡಲು ನಿರ್ಧರಿಸಿದೆ. ಜನಾಭಿಪ್ರಾಯ ವಿಧಾನವುಉದ್ದೇಶಪೂರ್ತಿಗೆ ಸ್ವೀಕೃತಿ ಪಡೆಯುವ ವಾಮ ಮಾರ್ಗವಾಗಿದೆ. ನಗರದ ವಿವಿಧೆಡೆಅಜ್ಞಾತಜನಸಮೂಹದ ಬೆಂಬಲ ಕೋರಲಾಗುತ್ತಿದೆ. ಎಎಪಿ ಸರ್ಕಾರರಚಿಸಬೇಕೆ ಎಂಬ ಪ್ರಶ್ನೆ ಕೇಳಲಾಗುತ್ತಿದೆ. ಸ್ವಾಭಾವಿಕವಾಗಿಜನರು ಈ ವಿಚಾರದಲ್ಲಿ ಪುಳಕಿತರಾಗಿದ್ದಾರೆ. ಈ ಒಂದು ಹಿನ್ನಲೆಯಲ್ಲಿ, ಅಂಕಿಅಂಶದ ಮಾಯಾಲೋಕವನ್ನು ಸೃಷ್ಟಿಸಿ, ಶೇಕಡ 30ಕ್ಕೂ ಕಡಿಮೆ ಮತಗಳನ್ನು ಗಳಿಸಿದ ಎಎಪಿ, ಶೇಕಡ 75ರಷ್ಟು ಮತದಾರರು ಸರ್ಕಾರರಚಿಸುವಂತೆ ಸೂಚಿಸಿರುವ ಫಲಿತಾಂಶ ಪಡೆದುಕೊಂಡಿದೆ.

ಇದರಅರ್ಥ, ರಾಜಕೀಯಅವಕಾಶವಾದಕ್ಕೆಜನಮಣ್ಣನೆಯತೊಗಲುತೊಡಿಸಲಾಗುತ್ತಿದೆ. ಆಧಿಕಾರದಾಹತಮಗಿಲ್ಲ, ತಾವುಕಾಂಗ್ರೆಸ್ ಬೆಂಬಲಕ್ಕೆ ಕಾತರರಾಗಿಲ್ಲ ಎಂಬ ಮನೋಭೂಮಿಕೆ ಪಡೆಯುವ ಪ್ರಯತ್ನವನ್ನುಅದರ ನಾಯಕರು ಮಾಡುತ್ತಿದ್ದಾರೆ. ಆದರೆ, ಪ್ರಜಾಪ್ರಭುತ್ವದಅಪ್ಪಟಆರಾಧಕರಾದ ನಾವು ಬಹುಸಂಖ್ಯಾತಜನಾಭಿಪ್ರಾಯಕ್ಕೆತಲೆ ಬಾಗಿದ್ದೇವೆ. ಕಾಂಗ್ರೆಸ್ ಬೆಂಬಲದೊಂದಿಗೆ ಎಎಪಿ ಸರ್ಕಾರರಚಿಸುವಜನಮತ ಲಭಿಸಿದೆ.

ಪರ್ಯಾಯರಾಜಕೀಯ ವ್ಯವಸ್ಥೆಯಉದಯವಾಗಿದಿಯೇ, ಅಥವಾಅದರಅಂತ್ಯವಾಗಲಿದಿಯೆ.

*********